ಐದು ವರ್ಷಗಳ ತಮ್ಮ ವೃತ್ತಿ ಬದುಕನ್ನು ‘ಬಾಹುಬಲಿ’ ಎಂಬ ಹೆಸರಿನ ಎರಡು ಪ್ರಾಡಕ್ಟ್‌ಗಳಿಗೆ ಕೊಟ್ಟ ನಟ ಪ್ರಭಾಸ್ ದೇಹದ ಕಣಕಣಕ್ಕೂ ಅಂಥದೊಂದು ಆಕಾರ ರೂಪಿಸಲು ಹೆಣಗಾಡಿದ್ದು ಎಲ್ಲರಿಗೂ ಗೊತ್ತಿದೆ. ಅವರ ಬೆನ್ನಿಗೆ ನಿಂತು, ‘ದೇಹ ಹೀಗೇ ಇರಬೇಕು’ ಎಂದು ಹಟಕ್ಕೆ ಬಿದ್ದ ನಿರ್ದೇಶಕ ರಾಜಮೌಳಿ ಅವರ ಉಮೇದು ಸ್ಪಷ್ಟ.

ಭುಜಗಳ ಅಗಾಧತೆ, ವಕ್ಷಸ್ಥಳದ ವೈಶಾಲ್ಯ ಸಾಧ್ಯವಾದದ್ದು ಹೇಗೆ, ಪ್ರಭಾಸ್ ವರ್ಕ್ ಔಟ್ ಮಾಡುತ್ತಿದ್ದ ರೀತಿ ಎಂತು, ಆಗೆಲ್ಲ ಅವರು ಹೊಟ್ಟೆಗೇನು ತಿನ್ನುತ್ತಿದ್ದರು ಇವೆಲ್ಲ ಸಂಗತಿಗಳನ್ನು ಹುಡುಕಿ ಓದುವ, ನೋಡುವ ಯುವವರ್ಗವೊಂದಿದೆ. ಅದೇ ದೇಹಮೋಹಿ ವರ್ಗ; ದೇಹಾಕಾರ ಪ್ರೇಮಿ ವರ್ಗ.



‘ಬಾಹುಬಲಿ’ ಚಿತ್ರದ ನಾಯಕ ಪ್ರಭಾಸ್ ಕಾಯದ ಹೊಳಪಿಗೆ ಮರುಳಾಗದವರಿಲ್ಲ

ಫಿಟ್‌ನೆಸ್ ಫ್ರೀಕ್ ಎನ್ನುವುದು ಈ ಕಾಲದ ವಿದ್ಯಮಾನವಷ್ಟೇ ಅಲ್ಲ. ಹಿಂದೆ ಗರಡಿ ಮನೆಗಳಿದ್ದಾಗ ಸಾಮು ಮಾಡುತ್ತಿದ್ದ ಹುಡುಗರಲ್ಲೂ ತಮ್ಮ ಭುಜಬಲದ ಮೇಲೆ ಇಷ್ಟೇ ನಂಬಿಕೆ ಇತ್ತು. ‘ರೂಪದರ್ಶಿ’ ಕಾದಂಬರಿ ಬರೆದ ಕೆ.ವಿ. ಅಯ್ಯರ್ ಕುರ್ಚಿಯ ಮೇಲೆ ಕುಳಿತು ತಮ್ಮ ದೇಹಧಾರ್ಢ್ಯ ತೋರಿಸಿದ ಫೋಟೊ ಒಂದನ್ನು ಕಣ್ಣಿಗೊತ್ತಿಕೊಂಡು ಜೊತೆಗೆ ಇಟ್ಟುಕೊಂಡಿದ್ದ ಎಷ್ಟೋ ಯುವಕರು ದಶಕಗಳ ಹಿಂದೆಯೇ ಇದ್ದರು. ಅಂಥವರಲ್ಲಿ ಇತ್ತೀಚೆಗಷ್ಟೇ ಅಗಲಿದ ನಟ ಲೋಕನಾಥ್ ಕೂಡ ಒಬ್ಬರು.

ಈಗ ಸಾಮು, ಕಸರತ್ತು, ವ್ಯಾಯಾಮ ಇವೆಲ್ಲವನ್ನೂ ಆವಿರ್ಭವಿಸಿಕೊಂಡಂತೆ ‘ಜಿಮ್ ಸಂಸ್ಕೃತಿ’ ಆವರಿಸಿಕೊಂಡಿದೆ. ಸಾಲು ಸಾಲು ಕನ್ನಡಿಗಳ ಮುಂದೆ ನಿಂತು ಗೋಡೆಗೆ ನೇತುಹಾಕಿದ ರೂಪದರ್ಶಿಯ ದೇಹಾಕಾರವನ್ನು ಕಣ್ಣಿಗಿಳಿಸಿಕೊಳ್ಳುತ್ತಾ, ತಾನೂ ಇಂತಿಷ್ಟು ಸಮಯದಲ್ಲಿ ಹಾಗೆ ಆಗಬೇಕು ಎಂಬ ಹೊಸ ವರ್ಷದ ಸಂಕಲ್ಪ ಮಾಡಿದ ತುಂಡು ಹೈಕಳು ಈಗ ಗಲ್ಲಿ ಗಲ್ಲಿಗಳಲ್ಲೂ ಸಿಗುತ್ತಾರೆ. ಹೊಸ ಜಿಮ್ ಶಾಖೆ ತೆರೆದ ದೊಡ್ಡ ಫಿಟ್‌ನೆಸ್ ಸಂಸ್ಥೆಯು ಉದ್ಯಾನದಲ್ಲಿ ದೇಹ ಕಟೆಯದ ಯುವಕರನ್ನು ನಿಲ್ಲಿಸಿ, ‘ಬನ್ನಿ...ಸೇರಿ... ವರ್ಷಕ್ಕೆ ಒಂಬತ್ತೇ ಸಾವಿರ’ ಎಂಬ ಒಕ್ಕಣಿಕೆಯ ಆಮಂತ್ರಣ ಹಂಚಿಸುತ್ತದೆ. ಮೊದಲೆಲ್ಲ ನಗರಗಳಿಗೆ ಸೀಮಿತವಾಗಿದ್ದ ಈ ‘ಜಿಮ್ ಸಂಸ್ಕೃತಿ’ ಈಗ ಪಟ್ಟಣಗಳಿಗೂ ಹಬ್ಬಿದೆ.

‘ಈ ಸಿಕ್ಸ್‌ಪ್ಯಾಕು ಗೀಕು ಮಾಡ್ಕೋತಾರಲ್ಲ, ಅದು ಅಷ್ಟು ಸಲೀಸೇ? ನಮ್ಮ ವಯಸ್ಸಿನೋರು ಅದನ್ನ ಮಾಡ್ಬೋದೇ? ಅದಿಲ್ಲದೇ ಇದ್ದರೆ ಜನ ಸ್ಕ್ರೀನ್ ಮೇಲೆ ನಮ್ಮನ್ನ ನೋಡೋಲ್ವೆ? ಬರೀ ದೇಹ ತೋರಿಸಿದ್ರೆ ಸಾಕೇ; ಆಕ್ಟಿಂಗು ಗೀಕ್ಟಿಂಗು ಮಾಡೋದ್ ಬ್ಯಾಡ್ವೇ? ಏನ್ ಟೈಮ್ ಬಂತಪ್ಪಾ...’ ಎಂದೊಮ್ಮೆ ನಟ ಜಗ್ಗೇಶ್ ತಮ್ಮದೇ ಶೈಲಿಯಲ್ಲಿ ಹೇಳಿ ನಿಟ್ಟುಸಿರಿಟ್ಟಿದ್ದರು. ಅಭಿನಯವನ್ನಷ್ಟೇ ನೆಚ್ಚಿಕೊಂಡು ಮೂರು ದಶಕ ನಟನಾಗಿ ಏಗಿರುವ ಅವರಿಗೆ ಭಾರತೀಯ ಚಿತ್ರರಂಗದ ಬಹುತೇಕ ನಟರು ಮೈಹುರಿ ಮಾಡಿಕೊಂಡಿದ್ದು ಸೋಜಿಗವೇ ಸರಿ. ಎಲ್ಲಾ ನಟರಿಗೂ ಅದು ಜರೂರಾಗಿಬಿಟ್ಟರೆ ಹೇಗಪ್ಪಾ ಎಂಬ ಅವರ ಆತಂಕಕ್ಕೂ ಕಾರಣ ಇಲ್ಲದೇ ಇಲ್ಲ.

ಯುಟ್ಯೂಬ್‌ನಂಥ ವಿಡಿಯೊದರ್ಶನ ಮಾಡಿಸುವ ವೆಬ್‌ಸೈಟ್‌ಗಳಲ್ಲಿ ಖ್ಯಾತ ನಟ–ನಟಿಯರು ಕಸರತ್ತು ಮಾಡುವ ನಿಮಿಷಗಟ್ಟಲೆಯ ವಿಡಿಯೊಗಳು ನೋಡಸಿಗುತ್ತವೆ. ಶಾರುಖ್ ಖಾನ್ ಸಿಕ್ಸ್‌ಪ್ಯಾಕ್ ಮಾಡಿದ್ದು, ಪ್ರಿಯಾಂಕಾ ಚೋಪ್ರಾ ಬಾಕ್ಸರ್ ದೇಹಾಕಾರ ರೂಪಿಸಿದ್ದು, ಪ್ರಭಾಸ್, ರಾನಾ ‘ಬಾಹುಬಲಿ’ಗೆಂದೇ ದೇಹಾಕಾರ ಕಟೆದದ್ದು, ತಮಿಳು ನಟ ವಿಶಾಲ್ ದಿನನಿತ್ಯದ ವರ್ಕ್‌ಔಟ್... ಹೀಗೆ ಅಲ್ಲಿ ನೋಡಲು ಸಿಗುವ ಸರಕುಗಳು ಅಸಂಖ್ಯ.

‘ಗಜಿನಿ ಚಿತ್ರಕ್ಕೆ ಅಮೀರ್ ಖಾನ್